

# ಶ್ವೇತಾ ಕಂಡ ಸೌದಿಯ ಸೊಬಗು

‘ಶ್ರೀರಸ್ತು ಶುಭಮಸ್ತು’, ‘ರಾಧಾ ರಮಣ’ ಧಾರಾವಾಹಿ ಖ್ಯಾತಿಯ ನಟಿ ಶ್ವೇತಾ ಪ್ರಸಾದ್ ಇತ್ತೀಚೆಗೆ ಸೌದಿ ಅರೇಬಿಯಾ ಪ್ರವಾಸೋದ್ಯಮ ಪ್ರಾಧಿಕಾರದ ಆಹ್ವಾನದ ಮೇರೆಗೆ ಅಲ್ಲಿಗೆ ಭೇಟಿ ನೀಡಿದ್ದರು. ತಮ್ಮ ಸೌದಿ ಪ್ರವಾಸದ ಅಪೂರ್ವ ಅನುಭವಗಳನ್ನು ‘ಸುಧಾ’ ಓದುಗರಿಗಾಗಿ ಹಂಚಿಕೊಂಡಿದ್ದಾರೆ.

■ ನಿರೂಪಣೆ: **ಸುಮ**

‘ಭವಿಷ್ಯದಲ್ಲಿ ಸೃಷ್ಟಿಯಾಗಬಹುದಾದ ಸಮಸ್ಯೆಗೆ ಈ ಕ್ಷಣದಲ್ಲಿ ಪರಿಹಾರ ಕಂಡುಕೊಳ್ಳುವುದು ಹೇಗೆ?’ – ಸೌದಿ ಅರೇಬಿಯಾ ಪ್ರವಾಸದುದ್ದಕ್ಕೂ ನನಗೆ ಕಂಡ, ನನ್ನಲ್ಲಿ ಅಚ್ಚರಿಯನ್ನು ಉಳಿಸಿದ ಬಹುಮುಖ್ಯ ಸಂಗತಿ ಇದು.

ತಮ್ಮ ದೇಶದ ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದೊಂದಿಗೆ ‘ಸೌದಿ ಅರೇಬಿಯಾ ಪ್ರವಾಸೋದ್ಯಮ ಪ್ರಾಧಿಕಾರ’ ಇತ್ತೀಚೆಗೆ ಮೊದಲ ಬಾರಿ ಆರು ದಿನಗಳ ಪ್ರವಾಸ ಆಯೋಜಿಸಿತ್ತು. ಬೇರೆ ಬೇರೆ ದೇಶದ, ಪ್ರವಾಸದಲ್ಲಿ ಆಸಕ್ತಿಯಿರುವ ಸೆಲೆಬ್ರಿಟಿಗಳನ್ನು ಆಹ್ವಾನಿಸಿದ್ದು, ಭಾರತದಿಂದ ಒಟ್ಟು ಹತ್ತು ಮಂದಿ ಪ್ರವಾಸಕ್ಕೆ ಹೊರಟಿದ್ದೆವು. ಕರ್ನಾಟಕದಿಂದ ಆಹ್ವಾನಿತಳಾದವಳು ನಾನೊಬ್ಬಳೇ ಎನ್ನುವುದು ನನಗೆ ಖುಷಿ ಹಾಗೂ ಹೆಮ್ಮೆಯ ಸಂಗತಿ.

ನನ್ನಮ್ಮ ಯಾವಾಗಲೂ ‘ದೇಶ ಸುತ್ತು, ಕೋಶ ಓದು’ ಎಂದು ಹೇಳುತ್ತಿದ್ದರು. ಅದರಂತೆ, ನಾನು ಆಗಾಗ ಎಲ್ಲಿಗಾದರೂ ಪ್ರವಾಸ ಹೋಗುತ್ತಿರುತ್ತೇನೆ. ನನ್ನ ಪಾಲಿಗೆ ಪ್ರವಾಸ ಎಂದರೆ, ಒಂದು ಸ್ಥಳವನ್ನು ನೋಡುವುದು ಎನ್ನುವುದಕ್ಕಿಂತ, ಅಲ್ಲಿನ ವೈವಿಧ್ಯವನ್ನು ಅರಿಯುವ, ಅಳವಡಿಸಿಕೊಳ್ಳುವ ಅವಕಾಶ. ಅದು ಕಲಿಕೆಯ ದಾರಿಯೂ ಹೌದು. ಈ ವಿಷಯದಲ್ಲಿ ಸೌದಿ ಅರೇಬಿಯಾ, ನನಗೆ ಕೊಟ್ಟಿದ್ದು ಬಹಳಷ್ಟು.

ಅಭಿವೃದ್ಧಿಯ ಹಳಿ ಮೇಲೆ ನಿರಂತರವಾಗಿ ಓಡುತ್ತಿರುವಂತೆ ಕಾಣುವ ದೇಶ ಸೌದಿ ಅರೇಬಿಯಾ. ಮರಳುಗಾಡಿನ ಬರಡು ನೆಲದಲ್ಲೂ ಜೀವನೋತ್ಸಾಹ ತುಂಬಿಕೊಂಡಂತೆ ಕಾಣುವ ಈ ಸ್ಥಳ, ಕಳೆದ ಮೂರು ವರ್ಷಗಳಲ್ಲಿ ಎದ್ದುನಿಂತ ಪರಿ ನೋಡಿದರೆ ಅಚ್ಚರಿಯಾಗುತ್ತದೆ. ದೇಶವೊಂದು ತನ್ನನ್ನು ತಾನು ಜಗತ್ತಿಗೆ ಬಿಂಬಿಸಿಕೊಳ್ಳಬೇಕಾದ ರೀತಿಗೂ ಒಂದು ಅತ್ಯುತ್ತಮ ನಿದರ್ಶನದಂತಿದೆ.

ಪ್ರವಾಸದ ಆರು ದಿನಗಳ ಅವಧಿಯಲ್ಲಿ ಇಲ್ಲಿನ ಮೂರು ಪ್ರಮುಖ ನಗರಗಳಿಗೆ ಭೇಟಿ ನೀಡಿದೆವು. ರಿಯಾದ್, ಅಲುಲಾ, ಜೆಡಾ – ಈ ಮೂರು ಹೆಸರಾಂತ ನಗರಗಳಿಗೆ ಭೇಟಿ ನೀಡಿ, ಅಲ್ಲಿನ ವೈಶಿಷ್ಟ್ಯಗಳನ್ನು ಪರಿಚಯ ಮಾಡಿಕೊಂಡೆವು.

ಒಂದೊಂದು ನಗರವೂ ಅದರದ್ದೇ ಅನನ್ಯತೆಯಿಂದ ಆಕರ್ಷಕವಾಗಿ ಕಾಣುತ್ತದೆ. ರಿಯಾದ್, ಅಭಿವೃದ್ಧಿ ಕಾರ್ಯಗಳಿಗೆ ಆರಿಸಿಕೊಂಡ ತಾಣ ಎನ್ನಬಹುದು. ಅಲುಲಾ, ಪರಂಪರೆಯನ್ನು ಬಿಂಬಿಸುವ ಸ್ಥಳ. ಪರಂಪರೆಯನ್ನು ಸಂರಕ್ಷಿಸಿಕೊಂಡೇ ಹೊಸತನಕ್ಕೆ ತುಡಿಯುತ್ತಿರುವಂತೆ ಕಾಣುವ ಅಲುಲಾ, ಎಂಥವರ ಚಿತ್ತವನ್ನೂ ಕದಿಯಬಲ್ಲದು. ನಾನು ಅತಿಯಾಗಿ ಮೆಚ್ಚಿದ ನಗರ ಕೂಡ ಅದುವೇ. ಪುರಾತನ ನಗರವೊಂದನ್ನು ಒಂದು ಆಸಕ್ತಿದಾಯಕ ಪ್ಯಾಕೇಜ್‌ನಂತೆ ಮಾಡಿ ಹೇಗೆ ಪ್ರವಾಸೋದ್ಯಮಕ್ಕೆ ಬಳಸಿಕೊಳ್ಳಬಹುದು ಎಂಬುದು ಅಲ್ಲಿ ಎದ್ದುಕಾಣುತ್ತದೆ. ಸುಂದರ ನಗರಿ ಜೆಡಾ ಕಲಾ ಪ್ರಕಾರಗಳಿಗೆ, ಚೆಲುವಿನ ತಾಣಗಳಿಗೆ ಹೆಸರುವಾಸಿ. ಸಮುದ್ರ ಕಿನಾರೆಯ ಸೌಂದರ್ಯ ಜೆಡಾಗೆ ಮೆರುಗು ತುಂಬಿದೆ.



